


International Journal of Kannada Research
www.kannadajournal.com

**ISSN: 2454–5813**
IJKR 2023; 9(4): 115-118
© 2023 IJKR
www.kannadajournal.com
Received: 25-10-2023
Accepted: 27-11-2023

**ಡಾ.ಬೋಜಮ್ಮ ಕೆ.ಎನ್**
ಸಹಾಯಕ ಪ್ರಾಧ್ಯಾಪಕರು,
ಶ್ರೀ.ಧ.ಮಂ.ಕಾಲೇಜು, ಉಜಿರೆ,
ದ.ಕನ್ನಡ.ಜಿಲ್ಲೆ, ಕರ್ನಾಟಕ,
ಭಾರತ

**Corresponding Author:**
**ಡಾ.ಬೋಜಮ್ಮ ಕೆ.ಎನ್**
ಸಹಾಯಕ ಪ್ರಾಧ್ಯಾಪಕರು,
ಶ್ರೀ.ಧ.ಮಂ.ಕಾಲೇಜು, ಉಜಿರೆ,
ದ.ಕನ್ನಡ.ಜಿಲ್ಲೆ, ಕರ್ನಾಟಕ,
ಭಾರತ

# ಮರುಕಥನೀಕರಣ – ಕನ್ನಡ ಮಹಿಳಾ ಕಾವ್ಯ

ಡಾ.ಬೋಜಮ್ಮ ಕೆ.ಎನ್

**ಪೀಠಿಕೆ**

ಆಧುನಿಕ ಮಹಿಳಾ ಸಾಹಿತ್ಯ ಕುರಿತು ಮಾತನಾಡುವಾಗ ಮಹಿಳೆಯ ಸಾಂಸ್ಕೃತಿಕ, ಸಾಹಿತ್ಯಿಕ ಪರಂಪರೆ ಮಹತ್ವದಾಗುತ್ತದೆ. ನಮ್ಮ ಸಂಸ್ಕೃತಿ ಎಂದರೆ ಅದು ಪುರುಷ ಸಂಸ್ಕೃತಿಯೇ; ಪುರುಷನಿಂದ ನಿರ್ಮಿತವಾಗಿ ಸ್ತ್ರೀ ಪುರುಷರಿಬ್ಬರೂ ಪಾಲಿಸಿಕೊಂಡು ಬಂದಂಥದ್ದು. "ನಮ್ಮ ಪುರಾಣ ಪುಣ್ಯಕತೆಗಳಲ್ಲಿ, ಮಹಾಕಾವ್ಯಗಳಲ್ಲಿ ಮಹಾರಾಜರ ಕಥೆಗಳು ದಾಖಲಾಗಿವೆಯೇ ಹೊರತು ಮಹಿಳೆಯರ ಕಥೆಗಳಲ್ಲ. ಇಲ್ಲಿ ಮಹಿಳೆಯರು ಭೋಗವಸ್ತುಗಳಾಗಿ ಅಲಂಕಾರ ಸಾಮಗ್ರಿಗಳಾಗಿ, ಸೇವಕ ವರ್ಗದವರಾಗಿ ಮಾತ್ರವೇ ಪ್ರಸ್ತಾಪಗೊಂಡಿದ್ದಾರೆ. ಕುಟುಂಬ ವ್ಯವಸ್ಥೆಯಲ್ಲಿ ತಾಯಿ, ಹೆಂಡತಿ ಮಗಳು ಎಂಬ ಸ್ಥಿರ ಮಾದರಿ ಪಾತ್ರಗಳಾಗಿ, ಪುರುಷ ಬದುಕಿನ ಪರಿಕರಗಳಾಗಿ ಕಾಣಿಸಿದ್ದಾರೆ. ಪಿತೃ ಸಂಸ್ಕೃತಿಯ ನಿರಂತರತೆಯ ಕಾವಲುಗಾರರಾಗಿ, ಪಾತಿವೃತ್ಯ, ಮಾತೃತ್ವಗಳನ್ನು ಅವಾಹಿಸಿಕೊಂಡು ಪರಿಪಾಲಿಸುವ ವಾಹಕಗಳಾಗಿ ದುಡಿದಿದ್ದಾರೆ. ಇಷ್ಟಾದರೂ ಇವರಾರಿಗೂ ಸ್ವಂತದ ಚಹರೆಗಳಿಲ್ಲ ಪುರುಷಕಲ್ಪಿತ ಚರಿತ್ರೆಯಲ್ಲಿ ಮಹಿಳೆಗೆ ಯಾವ ಅಸ್ತಿತ್ವವೂ ಇಲ್ಲ"(ಹೆಣ್ಣು ಬರೆಹದ ಒಳಬಂಡಾಯ – 2010,–88).

ಪುರಾಣದಲ್ಲಿ, ಚರಿತ್ರೆಯಲ್ಲಿ ಅವಜ್ಞೆಗೊಳಗಾದ ಸ್ತ್ರೀ ಪಾತ್ರಗಳನ್ನು ಆಧುನಿಕ ಕನ್ನಡ ಸಾಹಿತ್ಯದ ಮಹಿಳಾ ಸಾಹಿತಿಗಳು ತಮ್ಮ ಬರಹಗಳಲ್ಲಿ ಬಳಸಿಕೊಂಡರು. ಆಧುನಿಕ ಸಮಾಜದಲ್ಲಿ ಹಲವಾರು ಬದಲಾವಣೆಗೆ ಸ್ಪಂದಿಸುತ್ತಾ; ಪುರಾಣ ಇತಿಹಾಸಗಳನ್ನು ಹೊಸ ಎಚ್ಚರದೊಂದಿಗೆ ಜಿಜ್ಞಾಸೆಗೊಳಪಡಿಸುತ್ತಿರುವ ಆನೇಕ ಕವಿಯಿತ್ರಿಯರು ಪುರಾಣ ಇತಿಹಾಸಗಳು ಬಿಂಬಿಸಿದ ಪಾರಂಪರಿಕ ಮೌಲ್ಯಪದ್ಧತಿಯನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಪೌರಾಣಿಕ ಪಾತ್ರಗಳಾದ ಸೀತೆ, ಸಾವಿತ್ರಿ, ಶಕುಂತಲೆ, ಮಾಧವಿ, ದಮಯಂತಿ ಮೊದಲಾದವರು ಸಹಿಸಿದ ನೋವು, ಅಪಮಾನಗಳು ವೈಭವೀಕರಿಸಲ್ಪಟ್ಟು ಅವರು ಬಿಂಬಿಸಿದ ಸೇವೆ, ತ್ಯಾಗ, ತಾಳ್ಮೆ, ವಿಧೇಯತೆ, ಪಾತಿವ್ರತ್ಯ ಮೌಲ್ಯಗಳು ಮಹಿಳೆಯರ ಆದರ್ಶಗುಣಗಳೆಂದು ಪರಿಗಣಿಸಲ್ಪಟ್ಟಿವೆ. ಈ ಮೌಲ್ಯಗಳೆಲ್ಲ ಶತಶತಮಾನಗಳವರೆಗೆ ಪ್ರಶ್ನಾತೀತವಾಗಿ ಸ್ವೀಕರಿಸಲ್ಪಟ್ಟಿವೆ. ಆದರೆ ಇಂತಹ ಸ್ವೀಕೃತ ಮಾದರಿಗಳನ್ನು, ಸ್ತ್ರೀ ಕುಲಕೆ ಶಾಪವಾಗಿದೆ ಎಂದು ಆ ಮೌಲ್ಯಗಳನ್ನು ನಿರಾಕರಿಸಿದ್ದಾರೆ. "ಬದುಕಿನೊಂದಿಗೆ ತಾದಾತ್ಮ್ಯ ಹೊಂದುವುದರ ಜೊತೆಗೆ ಬದುಕನ್ನು ಬಗೆಯುವ ಕ್ರಿಯೆಯಲ್ಲಿ ತೊಡಗಿದ ಮಹಿಳೆ ತನ್ನ ದುರಂತದ ಶೋಷಣೆಯ ಬೀಜಗಳನ್ನು ನಮ್ಮ ಪರಂಪರೆಯಲ್ಲಿ ಗುರುತಿಸಿದಳು. ಹಲವಾರು ವರ್ಷಗಳ ಒಳಗುದಿ, ತ'ಪ್ತ ಭಾವನೆಗಳಿಗೆ ಕಾರಣ ತಿಳಿದ ಕೂಡಲೇ ಸ್ಫೋಟಿಸಿದಳು, ಅರ್ಭಟಿಸಿದಳು, ಅದಕ್ಕೆ ಅವಳು ಬೆಳೆಸಿಕೊಂಡದ್ದು ಪರಂಪರಾ'ಗತವಾದ ಆದರ್ಶ ಮತ್ತು ಸ್ತ್ರೀ ಮಾದರಿಗಳನ್ನು. ಆ ಮಾದರಿಗಳು ಈ ಕಾಲಕ್ಕೆ ಅಪ್ರಸ್ತುತವಾಗಿವೆ ಮತ್ತು ಸ್ತ್ರೀಕುಲಕ್ಕೆ ಅವು ಶಾಪವಾಗಿವೆ ಎಂಬ ಅರಿವು ಮೂಡಿತು. ಪುರಾಣ ಭಂಜನೆಯಿಂದ ಅಭಿವ್ಯಕ್ತಿ ಸಮರ್ಥವಾಯಿತು"(ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ–2006,ಪುಟ–66).

"ಮರುಕಥನೀಕರಣ ಕನ್ನಡ ಸಾಹಿತ್ಯದ ಒಂದು ಅದಿಮ ವ್ಯಾಪಾರ. ಆಧುನಿಕ ಮಹಿಳಾ ಕಾವ್ಯದಲ್ಲಿ ಪುರಾಣದ ಅನೇಕ ಪಾತ್ರಗಳು ಮರುಕಥನಕ್ಕೆ ಒಳಗಾಗಿವೆ" (ಮಹಿಳೆ ಚರಿತ್ರೆ–ಪುರಾಣ–2014,ಪುಟ–25). ಪುರಾಣ ಕಥನವನ್ನು ಯಥಾವತ್ತಾಗಿ ಪದ್ಯವಾಗಿ ಮರುಕಥಿಸುವ ಬಗೆಯನ್ನು ಸುನಂದಾ ಬೆಳಗಾಂಕರ ಅವರ 'ಶಾಲ್ಮಲಿ' ಕವನದಲ್ಲಿ ಗುರುತಿಸಬಹುದು.

ಒಂದು ದಿನ ಪಾರ್ವತಿ
ಮಾಡಿ ಮೈ ಮಣ್ಣ ಮೂರುತಿ
ಚೆಲುವ ಗಂಡ ಗೊಂಬಿ
ಬಸಿರ ಉಸಿರ ತುಂಬಿ
ತಲೆಬಾಗಿಲಲಿ ಮಗನ ನಿಲ್ಲಿಸಿ
ಯಾರನು ಒಳಗೆ ಬಿಡಬೇಡ ಎಂದು
ಆಜ್ಞೆಯ ವಿಧಿಸಿ ಹೋದಳು ಮೀಯಲೆಂದು
ಮನೆಗೆ ಬಂದ ಶಂಕರ
ಒಳಗೆ ಒಡದೆ ಕುವರ
ಸಿಟ್ಟಿಗೆದ್ದ ಶಿವಶಂಕರ ಭಯಂಕರ
ಕತ್ತರಿಸಿದನಾಕ್ಷಣ ರುಂಡವ ರುದ್ರ
(ಶಾಲ್ಮಲಿ,ಸುನಂದಾ ಬೆಳಗಾಂಕರ, ಪುಟ – 26)

ಇಂತದೇ ಮತ್ತೊಂದು ಕವನ ವಿಜಯದಬ್ಬೆಯವರ 'ಕುಂತಿಯ ಬೆಳಗು'. ಇಲ್ಲಿ ಕುಂತಿಯು ತನ್ನ ಮಗ ಕರ್ಣನಿಗೆ ತಾನು ಮಾಡಿದ ಮೋಸದ ಬಗ್ಗೆ, ತಾಯಿಯಾಗಿ ಮಗನನ್ನು ರಕ್ಷಿಸದೆ, ಅವನನ್ನು ಸಾವಿನ ಬಾಯಿಗೆ ತಳ್ಳುವಂತಹ ದುಃಸ್ಥಿತಿಗೆ ಒಳಗು ಮಾಡಿದ ಪುರುಷ ಪ್ರಧಾನ ವ್ಯವಸ್ಥೆಯ ಬಗ್ಗೆ, ಸತ್ಯವನ್ನು ಹೇಳಲಾರದ ತನ್ನ ಅಸಹಾಯಕತೆ, ಇಕ್ಕಟ್ಟಿನ ಸ್ಥಿತಿಯ ಕುರಿತು ಸ್ವಗತದಲ್ಲಿ ಪ್ರಶ್ನಿಸಿಕೊಳ್ಳುವ ಹಾಗೂ ಆ ಮೂಲಕ ತನ್ನ ಆತ್ಮವಿಮರ್ಶೆ ಮಾಡಿಕೊಳ್ಳುವುದನ್ನು ಚಿತ್ರಿಸುತ್ತದೆ. ಅದು ಹೀಗಿದೆ: 'ತೊಟ್ಟ ಬಾಣವ/ ತೊಡೆಂದೋ ತೊಡದಿರೆಂದೋ/ ಹೇಳಲು ನಾನು ಯಾರು?/ ಮತ್ತೆ ಬಿಕ್ಕಿದಳು ಮತ್ತೆ ಬಿಕ್ಕಿದಳು ಕುಂತಿ./ ತಂದೆ ಯಾರೋ/ ಸೂರ್ಯನೋ ಅವರಪ್ಪನೋ/ ಬಿತ್ತಿ ಬೈಗಿನಲ್ಲಿ ಕರಗಿ ಹೋದ/ ಆದರೆ ನಿತ್ಯದ ಬೆಳಕಲ್ಲಿ/ ತೇಲಿಬಿಡಬೇಕಾದವಳು/ ತೇಲಿಬಿಟ್ಟವಳು ... ನಾನು/ ಬಾಯಿಲ್ಲ ಕರ್ಣಾ ಬಾಯಿಲ್ಲ/ ನಿನ್ನ ಮಗನೆನ್ನಲು ನಾಲಗೆ ನಡುಗುತ್ತಿದೆ/ ಆದರೆ ಈ ಜೂಜಿನಲ್ಲಿ/ ನನ್ನಂಥ ಕಾಯಿಗಳಿಗೆ ದಿಕ್ಕೆಲ್ಲಿದೆ?' ಇಲ್ಲಿ ಮಹಾಭಾರತದ ಕುಂತಿಗಿಂತ ಭಿನ್ನವಾಗಿ ಆಲೋಚಿಸುವ ಕುಂತಿ ಪಾಂಡವರಿಗಾಗಿ ತೊಟ್ಟ ಬಾಣವ ಮತ್ತೆ ತೊಡದಿರು ಎನ್ನಲು ತನಗೆ ಯಾವ ಹಕ್ಕಿದೆ ಎಂಬ ಚಿಂತಿಸುತ್ತಾಳೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಂಕಷ್ಟಕ್ಕೆ ಒಳಗಾಗುವ ಕುಂತಿಯಂತಹ ಮಹಿಳೆಯರ ಕುರಿತು ಈ ಕವನ ಬೆಳಕು ಚೆಲ್ಲುತ್ತದೆ.

ಕೃಷ್ಣನ ಮೇಲಿನ ನಿಷ್ಕಲ್ಮಶ ಪ್ರೇಮಭಾವದಿಂದ ಅವನ ಆಗಮನದ ನಿರೀಕ್ಷೆಯಲ್ಲಿರುವ ಸತ್ಯಭಾಮೆಯ ಪ್ರೇಮದ ಪರಿಧಿಯನ್ನು ವಿಜಯದಬ್ಬೆ ಅವರ ಮತ್ತೊಂದು ಕವನ 'ಪ್ರೇಮನೇಮಿಗೆ' ಕಟ್ಟಿಕೊಡುತ್ತದೆ. ಮನದ ತುಂಬಾ ಪ್ರೇಮಿಯನ್ನು ತುಂಬಿಕೊಂಡಿರುವ ಹೆಣ್ಣಿನ ಚಿತ್ರಣವನ್ನು ನೀಡುವ ಈ ಕವನದಲ್ಲಿ 'ಸಂಸಾರ ವೃಕ್ಷದಡಿ ಕೂತು/ ಹಿಡಿದ ಜಡ ಧೂಳನ್ನು/ ಜಾಡಿಸುವವರಾರೋ ನಿನ್ನ ಹೊರತು?/ ಈ ಸಂಸಾರ ನಾವೆಯಲಿ/ ನುಗ್ಗಿರುವೀ ನೋವಿನ ನೀರನ್ನು/ ಹೊರದೂಡುವವರಾರೋ ನಿನ್ನ ಬಿಟ್ಟು?' ಎಂದು ಕೃಷ್ಣನನ್ನು ಕೇಳುತ್ತಾರೆ.

"ಇಲ್ಲಿನ ಎಲ್ಲ ಮರುಕಥನಗಳು ಹೀಗೆ ತದ್ವತ್ ಮರುನಿರೂಪಣೆಗಳೇ ಆಗಿರುವುದಿಲ್ಲ. ಇತಿಹಾಸವಾಗಿ ಪುರಾಣವಾಗಲಿ ಈ ಎಲ್ಲಕ್ಕೂ ಜಾತಿ, ವರ್ಗ, ಲಿಂಗದ ವಾಸನೆಗಳು ನಮ್ಮ ಭಾರತೀಯ ಸಂಧರ್ಭದಲ್ಲಿ ಅಂಟಿಕೊಂಡೇ ಇರುತ್ತವೆ. ಈ ವಾಸನೆಗಳನ್ನು ಮೀರಿದ ಸಂಕಥನಗಳು ಸಂಭವಿಸುವುದು ಪವಾಡವೇ ಸರಿ. ಇದಕ್ಕೆ ನಮ್ಮ ಮಹಿಳಾ ಕಾವ್ಯವು ಹೊರತಲ್ಲ. ಇಲ್ಲಿನ ಬಹುಪಾಲು ಮರುನಿರೂಪಣೆಗಳು ಯಥಾವತ್ ಮರುಕಥನಗಳಾಗಿರುವುದಿಲ್ಲ. ಅವು ಎಷ್ಟೋ ಬಾರಿ ಹೊಸ ಹೊಸದಾಗಿ ನಿರ್ಮಾಣಗೊಳ್ಳುತ್ತಾ ಇರುತ್ತವೆ. ಮತ್ತು ಹಳೆಯವು ಪುನಾರಚನೆ ಆಗುತ್ತಲೂ ಇರುತ್ತವೆ. ಕಥನವು ಪ್ರತಿಪಾದಿಸುವ ತಾತ್ವಿಕತೆ ಅಥವಾ ಮೌಲ್ಯಲೋಕ ಕವಿಯತ್ರಿಗೆ ಒಪ್ಪಿಗೆಯಾಗದಿದ್ದರೆ ಅದನ್ನು ಅವರು ತಿದ್ದಿ ಮರುರೂಪಿಸಿದ್ದಾರೆ. ಸ್ಥಾಪಿತ ಪುರಾಣ ಕಥನವನ್ನು ಮುರಿದು ಪ್ರತಿರೋಧಿ ಕಥನವೊಂದನ್ನು ಅದರ ಒಡಲಲ್ಲಿ ಕಟ್ಟಿದು ಇದೆ"(ಮಹಿಳೆ ಚರಿತ್ರೆ–ಪುರಾಣ–2014,ಪುಟ–25). ಭಾಗ್ಯ ಜಯ ಸುದರ್ಶನ ಅವರ ಭಾಗ್ಯ – ಬಳುವಳಿ ಕವನದಲ್ಲಿ ಇದನ್ನು ಗಮನಿಸಬಹ್ಮದು

ನೀವು ಮಾಡಿದವುಗಳೆಲ್ಲ ಉಸಿರಾಡಿವೆ ಇಲ್ಲಿ
ಹಸಿರಾಗಿವೆ, ಬೇರಾಗಿವೆ ಈ ನೆಲದಲ್ಲಿ
ಶಾಪವಾಗಿದೆ ಸ್ತ್ರೀ ಕುಲಕ್ಕೆ
(ಭಾಗ್ಯ – ಬಳುವಳಿ(ಸುಳ್ಳಿನಾಚೆಯಸತ್ಯ), ಭಾಗ್ಯ ಜಯಸುದರ್ಶನ)

ಹೀಗೆ ಸಮಾನತೆಯ ಅರಿವು ಹೊಂದಿದ ಮಹಿಳೆ ಪುರಾಣೇತಿಹಾಸಗಳ ಸ್ತ್ರೀ ಮಾದರಿಗಳನ್ನು ಭಗ್ನಗೊಳಿಸುವುದರ ಜೊತೆಗೆ, ಅಲ್ಲಿ ಶೋಷಣೆಗೊಳಗಾದ ಹೆಣ್ಣು ಪುರುಷ ಸಂಹಿತೆಯನ್ನು ಧಿಕ್ಕರಿಸಿ ನಡೆದದ್ದನ್ನೂ ಮೆಚ್ಚತೊಡಗಿಸಿದಳು. ದ್ರೌಪದಿ, ಕುಂತಿ, ದುರ್ಗಿಯಂಥ ಮಾತೃ ಪ್ರಧಾನ ಶಕ್ತಿಗಳನ್ನು, ಪಾತಿವ್ರತ್ಯ ಸತೀತ್ವಗಳ ಮೌಲ್ಯಗಳನ್ನು ತಿರಸ್ಕರಿಸಿದ ಅಹಲ್ಯೆ, ಅಮೃತಮತಿಯಂಥವರನ್ನು ಪ್ರತೀಕಾರಕ್ಕಾಗಿ ಹಾತೊರೆಯುವ ಕ್ರೋಧತಪ್ತಳಾದ ಅಂಬೆ, ಮಾಧವಿಯಂಥ ಪಾತ್ರಗಳನ್ನು ಸ್ವೀಕರಿಸುವ ಪ್ರವೃತ್ತಿ ಮಹಿಳಾ ಕಾವ್ಯದಲ್ಲಿ ಕಂಡುಬಂದಿತು.

ಈಗ ದುರ್ಗೆ ನಿನ್ನ ನೆನೆಸಿಕೊಂಡರೆ ಅಸೂಯೆಯಾಗುತ್ತೆ
ನೀನೊಬ್ಬಳೇ ಆದಿ ನಿನ್ನ ನಂತರದವರೆಲ್ಲ
ಮಾಯೆಯಾಗಿ ಮೋಹವಾಗಿ ಮೋಹಿನಿಯಾಗಿ
ಕೊನೆಗೆ ಬರಿ ಮಾನಿನಿಯರಾಗಿ
ಈಗೆಲ್ಲ ಷಂಡರಿಗೂ ಹೆದರುವ ಮಂಕುಗಳಾಗಿ
ದುರ್ಗೆ ನಿನ್ನಂಶವೆಲ್ಲೂ ಇಲ್ಲ
ನಮ್ಮ ಕೈಯಲ್ಲಿ ಆಯುಧಗಳಿಲ್ಲ
(ದುರ್ಗೆ(ಈತನಕ), ಪ್ರತಿಭಾ ನಂದಕುಮಾರ)

ಇನ್ನೊಂದು ಮಹತ್ವದ ಮಾತೆಂದರೆ, ಕವಿ ದೃಷ್ಟಿ ಮನೋವಿಶ್ಲೇಷಣಾತ್ಮಕ ಅಯಾಮವನ್ನು ಪಡೆದದ್ದು.

ಇದು ಜೀವ; । ಪ್ರೇಮ, ಕಾಮ, ಮೋಹ ಒಳಗೊಂಡದ್ದು
ಮೈ ಹಸಿವಿಗೆ ಜನ್ಮಾಂತರಗಳಿಲ್ಲ
ಬಂಧವಿಲ್ಲ ಈ ಪಾಡುಗಳಿಗೆ । ಹೊರುವ ಪಾಪಗಳಿಲ್ಲ
ಹಸಿವಿನೆದುರು ಏನಿಲ್ಲ
(ಅಮೃತಮತಿಯ ಸ್ವಗತ, ಎಚ್. ಎಲ್. ಪುಷ್ಪ)

ಎಂದು ದೇಹದ ಮೂಲಭೂತ ಅಗತ್ಯಗಳಲ್ಲಿ ಒಂದಾದ ಕಾಮದ ಹಸಿವನ್ನು ಹಿಂಗಿಸಿಕೊಳ್ಳುವುದನ್ನು ಸಮರ್ಥಿಸುತ್ತ 'ನಾವು ಜನ್ಮವೆತ್ತುತ್ತಲೇ ಇದ್ದೇವೆ ಅಮೃತಮತಿಯರಾಗಿ' ಎಂದು ಹೇಳುವ ದಿಟ್ಟತನ ಮಹಿಳೆಯರಲ್ಲಿ ಕಂಡುಬಂದಿತು.

ವಾದ್ಯ ಸಂಗೀತದ ಹಿನ್ನೆಲೆಗೆ । ಹಾ । ಎಂದು 'ಪಲ್ಲವಿ' ಸುತ್ತ
ಪ್ರಿಯ ಮಾವುತನ । ಅಂಕುಶದ ತುದಿ ತಾಗಿ
ಕುಂಭಸ್ಥಳಕೆ । ನಿರಂಕುಶ ತೇಲಿದಳು

'ತುರುತುರುನೆ ತೂರಿದಳು । ದಾಂಪತ್ಯದ ಮೌಲ್ಯವನು'
ಎಂದು ಅತ್ತ ಸಂಸ್ಕೃತಿಯ । ಗುತ್ತಿಗೆದಾರರನು ಧಿಕ್ಕರಿಸಿ
ನಕ್ಕಳಿವಳು ತುಟಿಯ । ಅಂಚಿನಲ್ಲಿ ಚೂಪಾಗಿ"
(ಮದ್ದಾನೆ ಮತ್ತು ಮಾವುತ, ಶಶಿಕಲಾ ವೀರಯ್ಯಸ್ವಾಮಿ,
ಪುಟ – 61)

ಅಮೃತಮತಿಯ ತುಟಿಯ ಅಂಚಿಗೆ ಚೂಪಾದ ನಗು ಲೇಪಿಸಿದ ಕವಯಿತ್ರಿಯ ತುಂಟತನ ವಿಡಂಬನೆಯನ್ನು ಹರಿತಗೊಳಿಸಿದೆ. "ಒಂದೇ ಪಾತ್ರದಲ್ಲಿ ವೈರುದ್ಯ ವರ್ತನೆಗಳು ಇರುತ್ತವೆ. ಯಾವ ಪಾತ್ರಗಳೂ ಪೂರ್ಣತೆ ಉಳ್ಳ ಪಾತ್ರಗಳಲ್ಲ; ಎಲ್ಲವೂ ಮನುಷ್ಯ ನಿರ್ಮಿತ ಪಾತ್ರಗಳಾದ್ದರಿಂದ ಎಷ್ಟೇ ಶತಶತಮಾನಗಳು ಸಾಹಿತ್ಯವನ್ನು ರಚಿಸಿ ಮರುರಚಿಸುತ್ತಾ ಬಂದರೂ ಪಾತ್ರಗಳನ್ನೂ ಸಂಪೂರ್ಣ ಆದರ್ಶ ಪಾತ್ರಗಳನ್ನಾಗಿ ರೂಪಿಸಲು ಆಗುವುದಿಲ್ಲ. ಯಾಕೆಂದರೆ ಜೀವನವೇ ಹಾಗಿಲ್ಲ. ಹಾಗಾಗಿ ಎಲ್ಲ ಪಾತ್ರಗಳೂ ಅರೆಕೊರೆ ಇರುವ ಮತ್ತು ಅಪೂರ್ಣವಾದ ಪಾತ್ರಗಳೇ. ಪಾತ್ರಗಳು ದೇವರಾಗಲೀ, ದಾನವರಾಗಲೀ, ಮಾನವರಾಗಲೀ ಎಲ್ಲರಲ್ಲು ಎಲ್ಲ ಅಂಶಗಳೂ ಇರುತ್ತವೆ" (ಮಹಿಳೆ ಚರಿತ್ರೆ – ಪುರಾಣ, ಪುಟ – 38) ಎಂಬುದನ್ನು ಶಶಿಕಲಾ ವೀರಯ್ಯಸ್ವಾಮಿಯವರ ಕವನದಲ್ಲಿ ಗುರುತಿಸಬಹುದು.

ಅದೊಂದು ದಿನ ಗೆಳತಿ ಅಂದಳು
ಕಲ್ಲಾದ ಅಹಲ್ಯೆಯ ಮೈಯ ನೇವರಿಸಿ
ಜೀವಸೆಲೆಯೊಡೆಸಿ ಬದುಕನುದ್ದರಿಸಿದನು
ಶ್ರೀರಾಮ, ಕರುಣಾಸಾಗರ, ಸದ್ಗುಣದಾಗರ
ಉಘೇ ಉಘೇ ಎಂದಿತು ಜನಸಾಗರ
ಜಗಕ್ಕೆಲ್ಲಾ ಹೆಮ್ಮೆಯೋ ಹೆಮ್ಮೆ
ಅದರಿನ್ನೊಮ್ಮೆ

ಇದೇ ಮಹಾತುಮ ಉಕ್ಕುವ ಜೀವಗಳನು ಹೊತ್ತ ಗರ್ಭಕ್ಕೆ ಮಂದಸ್ಮಿತೆ
ಜೀವನೋತ್ಸಾಹದಲ್ಲಿ ವಿಜೃಂಭಿಸುವ ಸತಿ ಸೀತೆಯನ್ನು ಕಾಡುಪಾಲಾಗಿಸಿ ಕೈ ತೊಳೆದನೀ ಸೀತಾರಾಮ

ಕರುಣಾಳು ರಾಘವನಲಿ ತಪ್ಪಿಲ್ಲ
ಎಂದತ್ತಳು ಮಾತೆ ಸೀತೆ ಅಲ್ಲವೇನೇ?
'ಈ ರಾಮಣ್ಣರೇ ಹೀಗೆ ಕಣೇ
ಗಿಜಸತಿಗೆ ಕಲ್ಲಾಗುವ ಇವರು
ಪರಸತಿಗೆ ಮಾತ್ರ ಬೆಲ್ಲವಾಗುತ್ತಾರೆ ಹೌದಲ್ಲವೇನೆ?
ಎಂದಳು ಗೆಳತಿ ಮತ್ತೆ
ಏನು ಹೇಳಲಿ ನಾನು? ಹೇಗೆ ಹೇಳಲಿ ಹೇಳಿ !
ಎದುರಿಗೆ ಕುಳಿತಿದ್ದ ಗಂಡ !!
ನನಗೊಂದು ಮುಖ ನನ್ನ ಕಛೇರಿ ಕನ್ಯೆಗೊಂದು
ಮುಖ ಹೊತ್ತ ಗಂಡ – ಭೇರುಂಡ !!!
(ಧಾರಾವಾಹಿ (ಬಟ್ಟ ಬಯಲಲ್ಲಿ ನಿಂತು), ಶಶಿಕಲಾ
ವೀರಯ್ಯಸ್ವಾಮಿ, ಪುಟ – 88)

ವಿಜಯದಬ್ಬೆಯವರ 'ಋಷಿ ಪತ್ನಿಯ ಸ್ವಗತ' ಕವನದಲ್ಲೂ ಅಹಲ್ಯೆ ತನ್ನ ಸ್ಥಿತಿ, ವರ್ತನೆ, ಗಂಡನ ನಡವಳಿಕೆ, ಸಂಸಾರದಲ್ಲಿನ ಅತೃಪ್ತಿಯ ಬಗ್ಗೆ ಸ್ವಗತದಲ್ಲಿ ಅಂದುಕೊಳ್ಳುವ ಮೂಲಕ ಅವಳ ಅಂತರಂಗದ ದುಃಖ ತೆರೆದುಕೊಳ್ಳುತ್ತದೆ. ಸ್ತ್ರೀ ಸಹಜ ಬಯಕೆ ಹೊಂದಿದ್ದ ಅಹಲ್ಯೆಗೆ ಗೌತಮನಿಂದ ಸಂಸಾರ ಸುಖ ಸಿಗದೆ ಮನಸ್ಸಿನಲ್ಲಿಯೇ ಕೊರಗುತ್ತಿದ್ದಾಗ, ಗಂಡನ ವೇಷದಲ್ಲಿ ಬಂದ ದೇವೇಂದ್ರನ ಬಲೆಗೆ ಸುಲಭವಾಗಿ ಬೀಳುತ್ತಾಳೆ. ಅಂತರಂಗದಲ್ಲಿ ಸರಿ ತಪ್ಪುಗಳ ಬಗೆಗೆ ಯೋಚಿಸಿ ಉತ್ತರ ತಿಳಿಯದೆ ಗೋಜಲುಗಳ ಮಧ್ಯೆ ದುಃಖಿಸಿ ಮಾರ್ಮಿಕ ಪ್ರಶ್ನೆಗಳನ್ನು ಎತ್ತುತ್ತಾಳೆ. ಇದೇ ವಿಷಯವನ್ನೊಳಗೊಂಡ ಮತ್ತೊಂದು ಕವನ ಸುಕನ್ಯಾ ಮಾರುತಿಯವರ 'ಅಹಲ್ಯೆ'. ಇಲ್ಲಿ "ಕಾದ ಕಬ್ಬಿಣವಾದ ನಾನು ಇಂದ್ರನ ಮೋಸಕ್ಕೆ ಮಣಿದಿದ್ದೆ, ತಣಿದಿದ್ದೆ" ಎಂದು ನೇರವಾಗಿ ಒಪ್ಪಿಕೊಳ್ಳುವ ಅಹಲ್ಯೆ,

"ನನಗೆ ಗೊತ್ತು ! ಮತ್ತೆ ಗೌತಮನ ಸರ್ಪ
ಹೆಡೆಯೆತ್ತಲಾರದು । ನನ್ನೊಳಗೆ ಏನನ್ನೂ ಬಿತ್ತಲಾರದು
ರಾಮಸ್ಪರ್ಶಕ್ಕೆ । ಶಿಲೆ ಸ್ಫೋಟವಾಗಿದೆ ಅಷ್ಟೇ । ಹೆಣ್ಣಾಗಲಿಲ್ಲ"
(ಅಹಲ್ಯೆ(ನಾನು–ನನ್ನವರು),ಸುಕನ್ಯಾ ಮಾರುತಿ)

ಎನ್ನುವಲ್ಲಿ ತಾನು ಹೆಣ್ತನದಿಂದಲೇ ವಂಚಿತೆಯಾದ ನೋವು ಸ್ಪಷ್ಟವಾಗಿದೆ. ಪುರಾಣವೆಂಬುದು ಎಂದೋ ಮುಗಿದು ಹೋದ ವಿಚಾರವಲ್ಲ; ನಿತ್ಯ ಜೀವನದಲ್ಲಿ ಈ ಬಗೆಯ ಕಥನಗಳು ಲಭಿಸುತ್ತದೆ. ಹೆಣ್ಣಿನ ಬದುಕಿಗೆ ಸಂಬಂಧಿಸಿದಂತೆ ಅದು ಮುಗಿದಿಲ್ಲ. ಬೇರೆ ಬೇರೆ ರೂಪದಲ್ಲಿ ಅದು ಮರು ಹುಟ್ಟು ಪಡೆಯುತ್ತಿದೆ ಎಂಬುದಕ್ಕೆ ಶಶಿಕಲಾ ಅವರ 'ಧಾರಾವಾಹಿ' ಕವನವನ್ನು ಗಮನಿಸಿಕೊಳ್ಳಬಹುದು.

ಮಾಡ್ಕೊಂಡ ಹೆಣ್ತಿ ಮನೀಗ ಬಂದ್ರ
ಬಾಗಲಾ ಹಾಕಿ ಕಿಡಕೀ ಸಂದ್ಯಾಗ
ಕುತಿಗೀ ಹಾಯ್ಸ ಯಾರ ನೀ
ಅನ್ನೂ ದುಶ್ಯಂತರು ಈಗಿಲ್ಲಂತೀರಾ?
ಸೇರದವರ ಚಾಡೀ ಕೇಳಿ
ಬಸರೀ ಹೆಣ್ಣಿನ ತವರೀಗ್ ಕಳಿಸಿ
ಸಾಜೂಗ ಅಗೂ ರಾಮದೇವರು ಈಗಿಲ್ಲಂತೀರಾ?
ಬೇಕೆಂದಾಗ ಮಜಾ ಮಾಡಿ
ಕೂಸಾದ ಕೂಡ್ಲೆ ಮಾರೀ ತಿರುವಿ
ಕೈ ಜಾಡಸೂ ಕೌಶಿಕ ಋಷಿಗೊಳು ಈಗಿಲ್ಲಂತೀರಾ?
ಅರೀಲಾರ್ದ ಮೈ ಮರೆತ ತಪ್ಪಿಗಾಗಿ ಬೇಡಿಕೊಂಡರೂ
ಜೀವಾ ಒಯ್ದು ಕಲ್ಲು ಮಾಡಿದ ಗೌತಮ ಋಷಿಗೊಳು
ಈಗಿಲ್ಲಂತೀರಾ?
(ಧಾರಾವಾಹಿ, ಶಶಿಕಲಾ ವೀರಯ್ಯಸ್ವಾಮಿ, ಪುಟ – 30)

ಹೆಣ್ಣಿನ ಹೃದಯ, ಮನಸ್ಸು, ಭಾವನೆ, ಮನವೀಯತೆಗಳತ್ತ ಮಹಿಳೆಯ ತುಡಿತ ಹೆಚ್ಚು ಸಂವೇದನಾಶೀಲವಾಯಿತು. ನಾಯಕನೆಂದರೆ ಧೀರೋದಾತ್ತ ನಿಲವು, ಉದಾರ ಮನಸ್ಸು, ಇತ್ಯಾದಿ ವರ್ಣಿಸುತ್ತ ನಾಯಕಿ ಎಂದರೆ । ಸೀತೆಗಿಂತ ಬೇರೆ ಬೇರೆ । ಹಾ! ಎಂತಹ ಸತೀ ಸಾದ್ವಿ? (ಒಂದು ವರ್ಣನೆ (ಕಳೆದು ಹೋಗಿದ್ದಾನೆ ಮನುಷ್ಯ), ಭಾಗ್ಯ ಜಯಸುದರ್ಶನ) ಎಂದು ವ್ಯಂಗ್ಯದುದ್ಗಾರ ತೆಗೆದು, ಸನಾತನ ಸ್ತ್ರೀ ಮಾದರಿಗಳ ನಿರ್ಮಾಣದ ಹಿಂದೆ ವಿಜೃಂಭಿಸುವ ಶೋಷಕ ಪ್ರವೃತಿಯನ್ನು ನಿರಾಕರಿಸುವ ಈ ಕವನ ಮುಂದೆ ಶಕುಂತಲೆ, ದ್ರೌಪದಿ, ಗಾಂಧಾರಿ, ಅಹಲ್ಯೆಯರ ಜೊತಗೆ ಎಂದು ಸೇರಿಸುವಾಗ ಆ ಸನಾತನ ಮಾದರಿಗಳ ಇಂದಿನ ಮುಂದುವರಿಕೆಯನ್ನು ತೋರುತ್ತದೆ. ಸರಸ್ವತಿ ಗಂಗೊಳ್ಳಿ ಅವರ "ಏನ ಹುಡುಕುತ್ತಿದ್ದಿ ಗಾಂಧಾರಿ" ಕವನ ಈ ಬಗೆಯದು.

ಹೆಣಗಳ ರಾಶಿಯಲ್ಲಿ
ನಿನ್ನ ಭವಿಷ್ಯ ಹುಡುಕುತ್ತಿದ್ದಿಯೇನೆ ಗಾಂಧಾರಿ?
ಕುರುಡ ಗಂಡನ ಕಣ್ಣಾಗಬೇಕಾಗಿದ್ದ ನೀನು
ಬಟ್ಟೆಯ ಪಟ್ಟಿ ಬಿಗಿದು
ಆದರ್ಶ ಪತಿವ್ರತೆಯ ಪಟ್ಟ ಕಟ್ಟಿಸಿಕೊಳ್ಳಲು ಹೋದೆಯಲ್ಲ
ಅಂದೇ ಕಣ್ಣು ಕಳೆದುಕೊಂಡಿರುವ ನೀನು
ಈಗೇನು ಹುಡುಕುತ್ತಿರುವಿ ಇಲ್ಲಿ?
(ಸರಸ್ವತಿ ಗಂಗೊಳ್ಳಿ, ಏನ ಹುಡುಕುತ್ತಿದ್ದಿ ಗಾಂಧಾರಿ)

ಭಾಗ್ಯ ಜಯಸುದರ್ಶನ ಅವರ 'ಗಾಂಧಾರಿಗೊಂದು ಪ್ರಶ್ನೆ' ಕವಿತೆಯಲ್ಲೂ ಪ್ರತಿವ್ರತೆಯ ಹೆಸರಿನಲ್ಲಿ ಅಕೆಯನ್ನು ಜೀವನ ಪರ್ಯಂತ ಕುರುಡಿಯಾಗುವ ದುಃಸ್ಥಿತಿಗೆ ಒಳಗು ಮಾಡಿದ ವ್ಯವಸ್ಥೆಯ ಬಗ್ಗೆ ಪ್ರತಿಭಟಿಸುವ ರೀತಿ ವಿಶಿಷ್ಟವಾಗಿದೆ.

ಕುರುಡನಿಗೆ ಕಣ್ಣಾಗಬೇಕಿದ್ದವಳು
ಕುರುಡಿಯಾಗಿ ತಾನೂ ಎಡವಿದೆ
ಕತ್ತಲೆಯ ಕೂಪಕ್ಕೆ ಎಲ್ಲರನ್ನೂ ಕಡವಿದೆ
ಹರಿದ ನೆತ್ತರ ಹೊಳೆಗೆ
ಬೇಕಿಲ್ಲದ ಇತಿಹಾಸದ ಕೊಡುಗೆ
ಈಗ ಹೇಳು
ಏನು ಕೊಟ್ಟು ಏನು ಪಡೆದೆ ಕೊನೆಗೆ
(ಅಂತರಂಗದ ಮಾತು, ಪುಟ – 57)

ಕೌಟುಂಬಿಕ ಅಸಮಾನತೆ – ಶೋಷಣೆಗಳನ್ನು ನಿಗ್ರಹಿಸಲು ಪ್ರಾತಿನಿತ್ಯ ಮದ್ದೆಂಬಂತೆ ಬಳಸುವ ಪುರುಷ ರಾಜಕೀಯವನ್ನು ಪ್ರಶ್ನಿಸಬೇಕಾಗಿರುವುದು ಈ ಕಾಲದ ತುರ್ತು ಎಂಬಂತೆ ಈ ಕವಿತೆ ಕಾಣಿಸಿಕೊಳ್ಳುತ್ತದೆ. ಮುಗ್ಧ ಆದರ್ಶವಾಗಿ ಭಿನ್ನ ರೂಪದಲ್ಲಿ ವ್ಯಕ್ತವಾಗಿರುವ ಈ ಕವಿತೆ ನಮ್ಮ ಸುತ್ತ ಮುತ್ತಲೂ ಇಂದೂ ಕಾಣಿಸಿಕೊಳ್ಳುವ ಗಾಂಧಾರಿಯಂತವರನ್ನು ನೀನು ಏಕೆ ತಪ್ಪು ಮಾಡಿದೆ? ಎಂದು ಎದುರಿಗೆ ನಿಲ್ಲಿಸಿ ಪ್ರಶ್ನಿಸಲಾಗುತ್ತಿದೆ. ಅಲ್ಲದೆ ಅಂತಹ ವ್ಯವಸ್ಥೆಯನ್ನು ಉಂಟುಮಾಡಿದ ಹುನ್ನಾರಗಳ ಬಗೆಗೂ ಇಲ್ಲಿ ಪ್ರತಿರೋಧ ವ್ಯಕ್ತವಾಗಿದೆ.

ಒಟ್ಟಾರೆಯಾಗಿ ಇಲ್ಲಿನ ಬಹುತೇಕ ಮಹಿಳಾ ಕವಿತೆಗಳು ಪುರುಷರೊಂದಿಗೆ ಸಮಾನವಲ್ಲದ, ಭಿನ್ನವಾದ ಒಂದು ಸ್ಥಿತಿಯನ್ನು ತಲುಪಿರುವ ಸ್ತ್ರೀಯರ ಬದುಕನ್ನು ಅನಾವರಣಗೊಳಿಸಿದೆ. ಮಹಿಳೆ ಮುಖ್ಯವಲ್ಲದ ಸಮಾಜದಲ್ಲಿ ಪಾತಿವ್ರತ್ಯ ಮೌಲ್ಯಗಳನ್ನು ಮುರಿದು ಹಳೆಯ ಮೌಲಿಕ ಪರಂಪರೆಯಲ್ಲಿ ಖಂಡನೆಗೊಳಗಾದ ಅಂಬೆ, ಅಹಲ್ಯೆ ಮತ್ತು ಅಮೃತಮತಿಯರ ಪಾತ್ರಗಳನ್ನೂ ಸಹಾನುಭೂತಿಯಿಂದ ಕಂಡಿದ್ದಾರೆ. ಮಾತೃ ಪ್ರಧಾನ ಸಮಾಜದಲ್ಲಿ ದುರ್ಗೆಗಿದ್ದ ಶಕ್ತಿ ಸ್ಥಾನಮಾನ ಸಾಮರ್ಥ್ಯಗಳನ್ನೆಲ್ಲ ಇಂದು ಇಲ್ಲವಾಗಿ ಆಕೆ ಕೇವಲ ಬೆದರು ಬೊಂಬೆಯಂತಾದ ಸ್ಥಿತಿಯ ಬಗ್ಗೆ ವಿಷಾದ ವ್ಯಕ್ತಗೊಂಡಿದೆ. ಪುರಾಣ ಕಾಲ ಪ್ರಭಾವಳಿಗಳಿಲ್ಲದೆ ಈ ಲೋಕದ ಮಹಿಳೆಯರು ದುರಂತ ಬದುಕನ್ನು ಒಪ್ಪ ಬೇಕಾಗಿದೆ. ಹಳೆಯ ಮೌಲಿಕ ಪರಂಪರೆ ಇಂದಿನ ಸಂದರ್ಭಕ್ಕೆ ಅರ್ಥಹೀನವಾಗಿ ಪರಿಣಮಿಸಿರುವುದನ್ನು ವಿಶ್ಲೇಷಿಸಿ ಅದನ್ನು ನಿರಾಕರಿಸಿ ಹೊಸ ರೂಪ ಕೊಡುವತ್ತ ಸಾಗಿದ್ದಾರೆ.

**ಆಕರ ಗ್ರಂಥಗಳು**


1. ಕಮಲ. ಎಂ.ಆರ್., ಹೂವು ಚೆಲ್ಲಿದ ಹಾದಿ, ಕಥನ ಪ್ರಕಾಶನ, ಬೆಂಗಳೂರು, 2007
2. ಪುಷ್ಪ ಎಚ್. ಎಲ್., ಅಮೃತಮತಿಯ ಸ್ವಗತ, ಅನ್ವೇಷಣೆ ಪ್ರಕಾಶನ, ಬೆಂಗಳೂರು, 1992
3. ಪ್ರತಿಭಾ ನಂದಕುಮಾರ್, ಈ ತನಕ, ಕನ್ನಡ ಸಂಘ– ಕ್ರೈಸ್ಟ್ ಕಾಲೇಜು, ಬೆಂಗಳೂರು, 1988
4. ಭಾಗ್ಯ ಜಯಸುದರ್ಶನ, ಸುಳ್ಳಿ ನಾಚೆಯ ಸತ್ಯ, ನೆಲಮನೆ ಪ್ರಕಾಶನ ಮೈಸೂರು, 1981
5. ಭಾಗ್ಯ ಜಯಸುದರ್ಶನ, ಅಂತರಂಗದ ಮಾತು, ಶುಭದ ಪ್ರಕಾಶನ, ಬೆಂಗಳೂರು 2005.
6. ವಿಜಯಾ ದಬ್ಬೆ, ತಿರುಗಿ ನಿಂತ ಪ್ರಶ್ನೆ, 1985
7. ಶಶಿಕಲಾ ವೀರಯ್ಯ ಸ್ವಾಮಿ, ಬಟ್ಟ ಬಯಲಲ್ಲಿ ನಿಂತು, ತನುಮನ ಪ್ರಕಾಶನ, ಮೈಸೂರು, 2006
8. ಸರಸ್ವತಿ ಗಂಗೊಳ್ಳಿ, ಕನಸು ಕನ್ನಡಿ, ಅಭಿನವ ಪ್ರಕಾಶನ, ಬೆಂಗಳೂರು, 2006.
9. ಸುಕನ್ಯಾ ಮಾರುತಿ, ನಾನೆಂಬ ಮಾಯೆ (ಸಮಗ್ರ), ಸಪ್ನ ಬುಕ್ ಹೌಸ್, ಬೆಂಗಳೂರು, 2007


**ಪರಾಮರ್ಶನ ಗ್ರಂಥಗಳು**


1. ರಾಮಚಂದ್ರಪ್ಪ ಬರಗೂರು, ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,2006.
2. ರಾಮಲಿಂಗಪ್ಪ ಟಿ.ಬೇಗೂರು, ಮಹಿಳೆ ಚರಿತ್ರೆ–ಪುರಾಣ, ಅಂಕಿತ ಪುಸ್ತಕ, ಬೆಂಗಳೂರು, 2014
3. ಶ್ರೀಮತಿ ಎಚ್.ಎಸ್. ಹೆಣ್ಣು ಬರೆಹದ ಒಳಬಂಡಾಯ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, 2010.